# ನಿಮ್ಮೊಡನೆ

## ಹಬ್ಬಗಳ ಸಾಲು: ವಿವೇಕ-ವೈಚಾರಿಕತೆಯ ಹಣತೆ ಮಕ್ಕಳ ಮನಸುಗಳಲ್ಲಿ ಬೆಳಗಲು ಇದು ಸಕಾಲ

ಹಬ್ಬಗಳ ಧಾರ್ಮಿಕ ಸಾಧ್ಯತೆಗಳನ್ನು ಕುಟುಂಬಗಳ ಚೌಕಟ್ಟಿಗೆ ಸೀಮಿತಗೊಳಿಸಿ, ವಿವೇಕ–ಅರಿವು–ಸೌಹಾರ್ದ ಮತ್ತು ಸಂಭ್ರಮವನ್ನು ಉತ್ಪಾದಿಸುವ ಪ್ರಯೋಗಶಾಲೆಗಳಾಗಿ ಶಾಲೆಗಳು ರೂಪುಗೊಳ್ಳಬೇಕಾಗಿದೆ.

ಪ್ರತಿ ವರ್ಷ ಶ್ರಾವಣ ಮಾಸದ ಆರಂಭದೊಂದಿಗೆ ಹಬ್ಬಗಳು ಒಂದರ ಹಿಂದೊಂದು ಇಣುಕತೊಡಗುತ್ತವೆ. ಹಬ್ಬಗಳ ಸಂದರ್ಭದಲ್ಲಿ ಪೇಟೆಗಳಲ್ಲಿನ ಚಟುವಟಿಕೆಗಳೂ ಚುರುಕಾಗುತ್ತವೆ. ಈಚಿನ ದಿನಗಳಲ್ಲಂತೂ ಪ್ರಮುಖ ಹಬ್ಬಗಳ ಸಂಭ್ರಮ ಮನೆಗಿಂತಲೂ ಹೆಚ್ಚಾಗಿ ಮಾರುಕಟ್ಟೆಯಲ್ಲೇ ಕಾಣಿಸುತ್ತಿದೆ. ದೊಡ್ಡವರ ಪಾಲಿಗೆ ಹಬ್ಬವೆನ್ನುವುದು ಯಾಂತ್ರಿಕ ಆಚರಣೆಯಾಗಿ ರೂಪುಗೊಂಡಿದ್ದರೆ, ಮಕ್ಕಳ ಪಾಲಿಗೆ ದೈನಿಕದ ಒತ್ತಡದ ನಡುವೆ ಒದಗಿಬರುವ ಬಿಡುಗಡೆಯ ಕಾಮನಬಿಲ್ಲು. ಈ ಸಂಭ್ರಮಕ್ಕೆ ಮತ್ತೊಂದು ಕಾರಣವೂ ಇದೆ. ಹಬ್ಬದ ಕಾರಣದಿಂದಾಗಿ ಶಾಲೆಗೆ ರಜೆ ದೊರೆಯುತ್ತದೆ. ಕಲಿಕೆಯೆನ್ನುವುದು ಒತ್ತಡದ ಸ್ವರೂಪ ಪಡೆದುಕೊಂಡಿರುವಾಗ, ಹಬ್ಬದ ನೆಪದಲ್ಲಿ ದೊರೆಯುವ ಬಿಡುವು ಸಂತೋಷ ಉಂಟುಮಾಡುವುದು ಸಹಜವೇ. ವಿಶೇಷ ಊಟ ಹಾಗೂ ಹೊಸ ಬಟ್ಟೆಯ ಸಾಧ್ಯತೆಗಳು ಹಬ್ಬದ ಸಂಭ್ರಮವನ್ನು ಮತ್ತಷ್ಟು ಕಳೆಗಟ್ಟಿಸುತ್ತವೆ.


ಹಬ್ಬದ ಮೂಲಭೂತ ಉದ್ದೇಶವೇ ಸಂತೋಷ ಸಂಭ್ರಮವನ್ನು ಹಂಚುವುದಾಗಿದೆ ಹಾಗೂ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವುದಾಗಿದೆ. ಶಿಕ್ಷಣ, ಉದ್ಯೋಗದ ಕಾರಣಕ್ಕಾಗಿ ಬಿಡುವು ಕಳೆದುಕೊಂಡ ಮನೆಮಂದಿ, ಹಬ್ಬದ ದಿನ ಮನೆಯಲ್ಲಿಯೇ ಉಳಿದು ಒಟ್ಟಿಗೆ ಸೇರಿ ಹಬ್ಬ ಆಚರಿಸುವ ಸಂತೋಷಕ್ಕೆ ಬೆಲೆ ಕಟ್ಟಲಾಗದು. ಬದುಕಿನ ಅಗತ್ಯಗಳಿಗೆ ಅನುಗುಣವಾಗಿ ಬೇರೆ ಬೇರೆ ಊರುಗಳಲ್ಲಿ ನೆಲೆಸಿದವರೂ ಹಬ್ಬದ ದಿನ ಒಟ್ಟಿಗೆ ಸೇರುತ್ತಾರೆ; ಈ ಸಮ್ಮಿಲನದಿಂದಾಗಿ ಸಂಬಂಧಗಳ ಹಾಗೂ ನೆನಪುಗಳ ನವೀಕರಣ ಸಾಧ್ಯವಾಗುತ್ತದೆ.

ಪ್ರತಿ ಹಬ್ಬದ ಹಿಂದೆಯೂ ಧಾರ್ಮಿಕ ಹಿನ್ನೆಲೆಯೊಂದು ಇರುತ್ತದಷ್ಟೇ. ಆದರೆ, ಕಾಲದ ಗತಿಯಲ್ಲಿ ಬಹಳಷ್ಟು ಆಚರಣೆಗಳು ಮೂಲ ಸ್ವರೂಪದಲ್ಲಿ ಉಳಿಯದೆ ಸವಕಳಿಗೊಂಡಿವೆ. ಆಧುನಿಕ ಸಂದರ್ಭದಲ್ಲಿ ಕೆಲವು ಆಚರಣೆಗಳಿಗೆ ಯಾವ ಅರ್ಥವೂ ಇರುವುದಿಲ್ಲ. ಹಾಗೆಂದು, ಹಬ್ಬದ ಆಚರಣೆಯ ಮಹತ್ವ ಕಡಿಮೆಯಾಯಿತು ಎಂದು ಭಾವಿಸಬೇಕಾಗಿಲ್ಲ. ಆಚರಣೆಗೊಂದು ಕಾರಣವನ್ನು ಕಲ್ಪಿಸುವ ಉದ್ದೇಶದಿಂದ ನಮ್ಮ ಹಿರಿಯರು ಹಬ್ಬದೊಂದಿಗೆ ಧಾರ್ಮಿಕ ಆಚರಣೆಗಳನ್ನು ತಳುಕು ಹಾಕಿದರು. ಈಗ ಆ ಕಾರಣಗಳು ಗೌಣವಾಗಿ, ಹಬ್ಬದ ಆಚರಣೆಗೆ ಹೊಸ ಕಾರಣಗಳು ದೊರೆತಿವೆ. ಕೌಟುಂಬಿಕ ಹಿನ್ನೆಲೆಗಳನ್ನು ಕೆದಕಿನೋಡಿದರೆ, ನಮ್ಮ ಇಂದಿನ ಬದುಕು ಪೂರ್ವಸೂರಿಗಳಿಗಿಂತ ಸಾಕಷ್ಟು ಬದಲಾಗಿದೆ. ನಡವಳಿಕೆ ಹಾಗೂ ನಂಬಿಕೆಗಳ ವಿಷಯದಲ್ಲಿ ಪ್ರತಿಯೊಂದು ತಲೆಮಾರೂ ಭಿನ್ನವಾಗಿರುತ್ತದೆ. ವಾಸ್ತವ ಹೀಗಿರುವಾಗ, ಹಬ್ಬಗಳ ವಿಷಯದಲ್ಲೂ ಬದಲಾವಣೆ ಅನಿವಾರ್ಯ. ಇಂದಿನ ಅಗತ್ಯಗಳಿಗೆ ತಕ್ಕಂತೆ ಆಚರಣೆಯೊಂದು ಬದಲಾಗದೆ ಹೋದರೆ, ಅದು ತನ್ನ ಆರ್ದ್ರತೆಯನ್ನು ಕಳೆದುಕೊಂಡು ಜೀವವಿರೋಧಿ ಗುಣಗಳನ್ನು ರೂಢಿಸಿಕೊಳ್ಳುವ ಸಾಧ್ಯತೆ ಇಲ್ಲದಿಲ್ಲ.

ನಿರ್ದಿಷ್ಟ ಸಮುದಾಯಕ್ಕೆ ಸಂಬಂಧಿಸಿದ ಹಬ್ಬಗಳು, ಜಾಗತೀಕರಣದ ಸಂದರ್ಭದಲ್ಲಿ ಎಲ್ಲರ ಸಂಭ್ರಮವಾಗಿ ಬದಲಾಗಿರುವುದನ್ನು ಗಮನಿಸಬಹುದು. ದೀಪಾವಳಿ ಹಾಗೂ ಕ್ರಿಸ್‌ಮಸ್ ಹಬ್ಬಗಳು, ಜಾಗತಿಕ ಹಬ್ಬಗಳಾಗಿ ಬದಲಾಗಿವೆ. ಈ ಹಬ್ಬಗಳ ಹಿಂದಿನ ಧಾರ್ಮಿಕ ಆಚರಣೆಗಳು ಆಯಾ ಸಮುದಾಯಕ್ಕೆ ಮುಖ್ಯವಾಗಿದ್ದರೂ, ಉಳಿದವರಿಗೆ ಸಂಭ್ರಮದ ಊಟೆಗಳ ರೂಪದಲ್ಲಿ ಕ್ರಿಸ್‌ಮಸ್–ದೀಪಾವಳಿ ಒದಗಿಬಂದಿವೆ. ದೀಪಾವಳಿಯ ಬೆಳಕು ಯಾರಿಗೆ ಬೇಡ? ಕ್ರಿಸ್‌ಮಸ್‌ನ ಸಾಂತಾಕ್ಲಾಸ್ ಯಾರಿಗೆ ಅನ್ಯ? ಹಬ್ಬದ ಸಂದರ್ಭದಲ್ಲಿ ಗೃಹಬಳಕೆ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಸೋವಿಯಾಗಿ ದೊರೆಯುವುದೂ ಇದೆ. ವ್ಯಾಪಾರೀಕರಣದ ರೂಪದಲ್ಲಿ ನಾವು ಗುರ್ತಿಸುವ ಈ ಬೆಳವಣಿಗೆಗೆ, ಆಚರಣೆಯೊಂದರ ಸಂಭ್ರಮವನ್ನು ‘ಎಲ್ಲರದೂ’ ಆಗಿಸುವ ಬಿಡುಗಡೆಯ ಸಾಧ್ಯತೆಯೂ ಇರುವುದನ್ನು ಮರೆಯಬಾರದು.

ಹಬ್ಬಗಳನ್ನು ಮೌಲ್ಯಗಳ ರೂಪದಲ್ಲಿ ಮಕ್ಕಳಿಗೆ ದಾಟಿಸುವ ಕೆಲಸ ಇಂದಿನ ಅಗತ್ಯ. ಈ ದಾಟಿಸುವಿಕೆ ಶಾಲೆಗಳಲ್ಲೂ ನಡೆಯಬೇಕು, ಮನೆಗಳಲ್ಲೂ ನಡೆಯಬೇಕು. ರಜೆ ಕೊಡುವಷ್ಟಕ್ಕೆ ಶಾಲೆಗಳ ಜವಾಬ್ದಾರಿ ಮುಗಿಯಬಾರದು. ಹಬ್ಬವೊಂದರ ಹಿನ್ನೆಲೆಯಲ್ಲಿರಬಹುದಾದ ವೈಚಾರಿಕ ಅರಿವನ್ನು ದಾಟಿಸುವ ಹಾಗೂ ಮನಸ್ಸುಗಳನ್ನು ಬೆಸೆಯುವ ಸೃಜನಶೀಲ ಕ್ರಿಯೆಯಾಗಿ ಹಬ್ಬದ ಆಚರಣೆಯನ್ನು ರೂಪಿಸಬೇಕಾದ ಅಗತ್ಯವನ್ನು ಎಳೆಯರಿಗೆ ಮನವರಿಕೆ ಮಾಡುವ ಹೊಣೆಗಾರಿಕೆ ಶಾಲೆಗಳದೇ ಆಗಿದೆ. ಬಹುತೇಕ ಹಬ್ಬಗಳು ಒಂದಲ್ಲಾ ಒಂದು ಬಗೆಯಲ್ಲಿ ಪರಿಸರದೊಂದಿಗೆ ನಂಟು ಹೊಂದಿವೆ. ಮನುಷ್ಯ ಹಾಗೂ ಪ್ರಕೃತಿಯ ಸಹಯೋಗದ ಉದ್ದೇಶ ಹಬ್ಬಗಳಲ್ಲಿದೆ. ಈ ನಂಟನ್ನು ಮಕ್ಕಳಿಗೆ ಅರ್ಥ ಮಾಡಿಸುವ ಮೂಲಕ, ಭಾವೀ ಪ್ರಜೆಗಳಲ್ಲಿ ಪರಿಸರ ಪ್ರೇಮ ರೂಪಿಸಲಿಕ್ಕೆ ಹಬ್ಬಗಳನ್ನು ಬಳಸಿಕೊಳ್ಳಬಹುದಾಗಿದೆ. ಮನೆಗಳಲ್ಲಿ ಕೆಲವು ಹಬ್ಬಗಳಿಗಷ್ಟೇ ಅವಕಾಶವಿರುತ್ತದೆ. ಎಲ್ಲ ಧರ್ಮಗಳ ಹಬ್ಬಗಳ ಆಚರಣೆಗೆ ಶಾಲೆಗಳು ಅತ್ಯುತ್ತಮ ವೇದಿಕೆಗಳಾಗಿವೆ. ಧಾರ್ಮಿಕ ಸಾಧ್ಯತೆಗಳನ್ನು ಕುಟುಂಬಗಳ ಚೌಕಟ್ಟಿಗೆ ಸೀಮಿತಗೊಳಿಸಿ, ವಿವೇಕ–ಅರಿವು–ಸೌಹಾರ್ದ ಮತ್ತು ಸಂಭ್ರಮವನ್ನು ಉತ್ಪಾದಿಸುವ ಪ್ರಯೋಗಶಾಲೆಗಳಾಗಿ ಶಾಲೆಗಳು ರೂಪುಗೊಳ್ಳಬೇಕಾಗಿದೆ.

■ ರಘುನಾಥ ಚ.ಹ.




ಈಶ್ವರ್